# ಆಹಾ ಸುದ್ದಿ!

★ ಸಸಿತೋಟ



ಈ ಚಿರತೆಗೂ ಸೆಲ್ಫಿಗೆ ಪೋಸ್ ನೀಡುವ ಹುಚಿ. ತಾಂಜಾನಿಯಾದ ಸೆರೆಂಗೇಟಿ ಅರಣ್ಯದಲ್ಲಿ ಕುಟುಂಬವೊಂದು ಸಫಾರಿ ಮಾಡುತ್ತಿದ್ದಾಗ ಒಳಗೆ ಜಿಗಿದ ಚಿರತೆ ಸೀಟು ಹಿಡಿದುಕೊಳ್ಳುವ ಧಾವಂತದಲ್ಲೂ ಹೀಗೆ ಪೋಸ್ ನೀಡಿದೆಯೆಂದರೆ ಅದು ನೂರಕ್ಕೆ ನೂರರಷ್ಟು ಸೆಲ್ಫಿಯೇ ಇರಬಹುದು.

ಮೊಬೈಲ್ ನೆಟ್‌ವರ್ಕ್ ಕಂಪೆನಿಯೊಂದು ತನ್ನ ಸದಸ್ಯರಿಗೆ ಪ್ರೈಂ ಸದಸ್ಯತ್ವ ನೀಡಿ ಉಚಿತ ಸೇವೆ ಒದಗಿಸಿದ್ದು ಈಗ ಹಳೆಯ ಸುದ್ದಿ. ಆದರೆ ಲೈಂಗಿಕ ಚಿತ್ರಗಳ ವೆಬ್‌ಸೈಟೊಂದು ಲೈಂಗಿಕತೆ ಸೂಚಿಸುವ ಹೆಸರುಳ್ಳ ಊರಿನ ನಿವಾಸಿಗಳಿಗೆ ಉಚಿತವಾಗಿ ಪ್ರೈಂ ಸದಸ್ಯತ್ವ ನೀಡುತ್ತಿದೆಯಂತೆ. ವಿಶ್ವಾದ್ಯಂತ ಇಂತಹ ಹೆಸರುಳ್ಳ ಊರುಗಳ ಪಟ್ಟಿ ಮಾಡುವ ಅಭಿಯಾನ ಶುರು ಮಾಡಿದ್ದು, ತಮಿಳುನಾಡಿನ ಹಳ್ಳಿಯೊಂದು ಪಟ್ಟಿಯಲ್ಲಿ ಸ್ಥಾನ ಪಡೆದಿದೆಯಂತೆ.



ಅಮೆರಿಕಾದ ವಿದ್ಯಾರ್ಥಿ ಆ್ಯಂಡ್ರ್ಯೂ ರಸ್ತೆಯ ಹೊಂಡದಲ್ಲಿ ಹಾಲು ಮತ್ತು ಧಾನ್ಯದ ಹಿಟ್ಟನ್ನು ಮಿಶ್ರ ಮಾಡಿ ಉಪಾಹಾರ ಸವಿದನಂತೆ. ಇದೇನೂ ಸರ್ಕಾರದ ವಿರುದ್ಧ ಪ್ರತಿಭಟನೆಯಲ್ಲ, ಹಾಗೇ ತಮಾಷೆಗೆ ಎಂದಿದ್ದಾನಂತೆ. ಆದರೆ ಬೆಂಗಳೂರಿನ ರಸ್ತೆ ಹೊಂಡಗಳಲ್ಲಿ ಈ ರೀತಿಯ ತಮಾಷೆ ಇದುವರೆಗೂ ನಡೆದಿಲ್ಲ ಅಲ್ಲವೇ!



ಅಮೆರಿಕದ ಅರ್ಕಾನಸ್ ಪ್ರಾಂತ್ಯದಲ್ಲಿ ಕೋಳಿ ಕಾಳಗ ನಡೆಸುತ್ತಿದ್ದ ಸುಮಾರು 140 ಮಂದಿಯನ್ನು ಪೊಲೀಸರು ಬಂಧಿಸಿದರಂತೆ. ಜೊತೆಗೆ 200 ಕೋಳಿಗಳೂ ಪೊಲೀಸ್ ಠಾಣೆಯಲ್ಲೇ ಠಿಕಾಣಿ ಹೂಡಿದ್ದಾವಂತೆ. ಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥವಾಗುವವರೆಗೂ ಈ ಕೋಳಿಗಳಿಗೂ ರಾಜಾತಿಥ್ಯ. ಯಾವುದಾದರೂ ಕೋಳಿ ಗೊಟಕ್ ಎಂದರೆ ಠಾಣೆ ಸಾವು ಪ್ರಕರಣ ಗ್ಯಾರಂಟಿ ಎಂದು ಪೊಲೀಸರು ಆರೋಪಿಗಳಿಗಿಂತ ಇವುಗಳಿಗೇ ರಾಜಾತಿಥ್ಯ ನೀಡುತ್ತಿದ್ದಾರಂತೆ.



ಕ್ಯಾಲಿಫೋರ್ನಿಯಾದಲ್ಲಿ ಸೆಲ್ಫಿ ವಸ್ತು ಸಂಗ್ರಹಾಲಯದ ಒಂದು ಝಲಕ್. ಆಗಮಿಸುವವರು ಮನಸ್ಸಿಗೆ ತೋಚಿದ್ದನ್ನು ಮಾಡಿ ಸೆಲ್ಫಿ ತೆಗೆದುಕೊಳ್ಳಬಹುದಂತೆ.

ಉದಯಪುರದಲ್ಲಿ 80ರ ವೃದ್ಧ ದೇವದಾಸ್ 48 ವರ್ಷಗಳಿಂದ ಕೂಡಿಕೆ ಮಾಡಿಕೊಂಡಿದ್ದ ತನ್ನ 'ಪಾರೊ' ಮಗ್ದು ಬಾಯಿಯನ್ನು ಇತ್ತೀಚೆಗೆ ಮದುವೆ ಮಾಡಿಕೊಂಡನಂತೆ. ಮೊದಲ ಹೆಂಡತಿಯ ಮಗ ಮಧ್ಯಸ್ಥಿಕೆ ವಹಿಸಿ ಈ ಮದುವೆ ಮಾಡಿಸಿದನಂತೆ. ಮದುವೆಗೆ ಬೇರೆ ಯಾರಿಗೂ ಆಹ್ವಾನ ಇರದಿದ್ದರೂ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳ ದಿಬ್ಬಣವಂತೂ ಇದ್ದೇ ಇತ್ತು.